ಆಗಲಿಲ್ಲ. ನನ್ನ ಹಾಗೆ ಸಾಲಕ್ಕೆ ಶ್ಯೂರಿಟಿ ಹಾಕಿದ್ದ ಇನ್ನೊಬ್ಬ ಕಲೀಗ್ ಬ್ಯಾಂಕಿನವರು ನಮ್ಮ ಮೇಲೆ ಕೇಸು ಹಾಕೋ ಮೊದಲು ದುಡ್ಡು ಕಟ್ಟಿಬಿಡೋಣ ಅಂದರು. ಕೊನೆಗೆ ಅವನ ಸಾಲದ ಸ್ವಲ್ಪ ಭಾಗವನ್ನು ನಾನು ತೀರಿಸಿದೆ. ಈಗ ಅವನು ಐದಾರು ಸಿನಿಮಾಗಳಲ್ಲಿ ಆಕ್ಟ್ ಮಾಡಿದ್ದಾನಂತೆ. ಭಾನುಪ್ರಕಾಶ್ ಅಂತ ಹೆಸರು ಬದಲಾಯಿಸಿಕೊಂಡಿದ್ದಾನಂತೆ. ಈಚೆಗೆ ಅವನೇ ನನ್ನ ಫೋನ್ ನಂಬರ್ ಬೇಕಿತ್ತು ಅಂತ ಮೊದಲಿದ್ದ ಬ್ಯಾಂಕಿನ ಕಲೀಗೊಬ್ಬರಿಗೆ ಫೋನ್ ಮಾಡಿ ಕೇಳಿದನಂತೆ! ಅವನಿಗೆ ನಂಬರ್ ಕೊಡಲೇ ಅಂತ ಅವರು ನಂಗೆ ಫೋನ್ ಮಾಡಿ ಕೇಳಿದರು. ಕೊಡಬೇಡಿ ಅಂತ ಹೇಳಿದೆ. ಅವನು ನಿಜವಾಗಿಯೂ ನನ್ನನ್ನು ಇಷ್ಟಪಟ್ಟಿದ್ದನೇ ಅಂತ ಈಗ ಅನ್ನಿಸ್ತಿದೆ. ಇವತ್ತು ಅವನು ಮತ್ತೆ ಮತ್ತೆ ನೆನಪಾದ. ಅವನ ವಿಷಯ ನಿಂಗೆ ಹೇಳಬೇಕು ಅನ್ನಿಸ್ತು' ಎಂದಳು.

'ಅಭಿ ನಂಗೆ ಪರಿಚಯವಾಗಿದ್ದು ವರ್ಲ್ಡ್ ಬ್ಯಾಂಕ್‌ನ ಏಷಿಯಾ ರೀಜನ್‌ನ ಆಫೀಸರ್ಸ್ ಪೋಸ್ಟ್‌ಗೆ ರಿಟನ್ ಎಕ್ಸಾಂ ಬರೆಯುವಾಗ. ನಾನು ಸೆಲೆಕ್ಟ್ ಆಗಲಿಲ್ಲ. ಅಭಿ ಸೆಲೆಕ್ಟ್ ಆದ. ಢಾಕಾದಲ್ಲಿ ಅವನಿಗೆ ಮೊದಲ ಪೋಸ್ಟಿಂಗ್ ಸಿಕ್ಕಿತ್ತು. ಯಾಕೋ ಏನೋ ಅವನು ಹೋಗಲಿಲ್ಲ. ಆಮೇಲೆ ಇಬ್ಬರೂ ಬೇರೆ ಬ್ಯಾಂಕುಗಳಿಗೆ ಸಲೆಕ್ಟ್ ಆದ್ವಿ. ಅಭೀನೆ ನಂಗೆ ಪ್ರಪೋಸ್ ಮಾಡಿದ. ಅವನು ಮಲೆಯಾಳಿ. ಇಬ್ಬರ ಮನೆಯವರೂ ಮದುವೆಗೆ ಒಪ್ಪಲಿಲ್ಲ. ನಾವೇ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಮದುವೆ ಮಾಡಿಕೊಂಡ್ವಿ. ಆರು ತಿಂಗಳು ಕಳೆದ ಮೇಲೆ ಅಭಿ ನನ್ನನ್ನು ಅವನ ಊರಿಗೆ ಕರೆದುಕೊಂಡು ಹೋದ. ಅಲಪ್ಪುಳಕ್ಕೆ ಹತ್ತು ಕಿಲೋಮೀಟರು ದೂರದಲ್ಲಿ ಅವನ ಊರು. ಅವನಮ್ಮ ಕೊಲ್ಲೂರು ಮೂಕಾಂಬಿಕೆಯ ಭಕ್ತೆ. ತೋಟದ ನಡುವೆ ಅವರ ಮನೆ. ಅಭಿಯ ಅಮ್ಮ, ಅವನ ತಂಗಿಯರು ನಂಗೆ ಇಷ್ಟವಾದರು. ಎಲ್ಲವೂ ಸರಿ ಹೋಯಿತು. ಒಂದು ಮಗುವಾದರೆ ನಮ್ಮ ಸಂಬಂಧ ಇನ್ನೂ ಗಟ್ಟಿಯಾಗುತ್ತೆ ಅನ್ನಿಸಿತ್ತು. ಅಷ್ಟರಲ್ಲಿ ನಮ್ಮ ನಡುವೆ ಈ ಸುದೇಷ್ಣ ಬಂದಳು. ಈಗ ಏನು ಮಾಡಬೇಕು ಅಂತಾನೇ ಗೊತ್ತಾಗ್ತಿಲ್ಲ. ಹೆಂಡತಿ ಇರುವಾಗಲೇ ಇನ್ನೊಬ್ಬಳ ಜತೆ ಸಂಬಂಧ ಇಟ್ಕಂಡಿರೋ ಅವನಿಗೆ ಒಂದು ಸಣ್ಣ ಗಿಲ್ಟ್ ಸಹ ಇಲ್ಲ. ನಾನೇ ಹೀಗೆ ಮಾಡಿದ್ದರೆ ಅವನು



ಏನು ಮಾಡ್ತಿದ್ದ' ಎಂದು ಕೇಳಿದಳು. ಸಿದ್ಧಾರ್ಥನಿಂದ ಉತ್ತರ ಬರಲಿಲ್ಲ. ಅವನು ನಿದ್ದೆ ಮಾಡ್ತಿರಬಹುದೇ ಅನ್ನಿಸಿ ಮೂರ್ನಾಲ್ಕು ಸಲ ಹಲೊ ಹಲೋ ಅಂದಳು. ಅವನಿಂದ ಉತ್ತರ ಬರಲಿಲ್ಲ. ಇಷ್ಟೊತ್ತು ನಾನು ಹೇಳಿದ್ದನ್ನು ಅವನು ಕೇಳಿಕೊಂಡಿಲ್ಲ ಅನ್ನಿಸಿ ಫೋನ್ ಡಿಸ್‌ಕನೆಕ್ಟ್ ಮಾಡಿಕೊಂಡಳು.

ಮರುದಿನ ಬೆಳಿಗ್ಗೆ ಮತ್ತೆ ಮಳೆ ಶುರುವಾಯಿತು. ಬಂಗಾಳ ಕೊಲ್ಲಿಯಲ್ಲಿ ಮತ್ತೆ ಡಿಪ್ರೆಷನ್ ಅಂತೆ. ಮೂರು ದಿನ ಮಳೆ ಇರುತ್ತೆ ಎಂದು ಟೀವಿಗಳಲ್ಲಿ ಸುದ್ದಿ ಬಂತು. ಹನ್ನೆರಡರ ಹೊತ್ತಿಗೆ ಸಿದ್ಧಾರ್ಥನೇ ಅರುಂಧತಿಗೆ ಫೋನ್ ಮಾಡಿದ. ಸಾರಿ, ರಾತ್ರಿ ನಿನ್ನ ಮಾತು ಕೇಳ್ತ ಕೇಳ್ತ ಹಾಗೇ ಮಲಗಿಬಿಟ್ಟೆ. ತುಂಬಾ ಸುಸ್ತಾಗಿತ್ತು ಅಂತ ಹೇಳಿ ಮತ್ತೆ ಸಾರಿ ಅಂದ. ಇವತ್ತು ಸಂಜೆ ಬ್ಯಾಂಕಿಂದ ಮನೆಗೆ ಹೋಗೋ ಮೊದಲು ಕಾಫಿ ಹೌಸ್‌ಗೆ ಬರ್ತೀಯಾ ಎಂದು ಕೇಳಿದ. ಇಲ್ಲ, ಇವತ್ತೂ ನಾನು ರಜೆ ಹಾಕಿದ್ದೀನಿ ಅಂದಳು. ಇಡೀ ದಿನ ಜಿಟಿ ಜಿಟಿ ಮಳೆ ಸುರಿಯುತ್ತಲೇ ಇತ್ತು.